ಗೊತ್ತಿದೆ. ಅವರ ಜೊತೆಗೆ ಕುಳಿತು ಮಾತನಾಡಿ, ಅವಕಾಶವಿದ್ದರೆ ಉಪಯೋಗ ಮಾಡಿಕೊಳ್ಳಿ.

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಒಂದು delegation ಬಂದಿತ್ತು, ನಾವು ಅವರಿಗೆ 12 ಟಿ.ಎಂ.ಸಿ. ನೀರು ಸಾಧ್ಯವಿಲ್ಲ, ಇದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದೇವೆ. ಈಗಲೂ ಅದನ್ನು ಪುನರ್ ಉಚ್ಚರಿಸುತ್ತಿದ್ದೇನೆ, 12 ಟಿ.ಎಂ.ಸಿ. ನೀರು ಲಭ್ಯವಾಗುವುದಿಲ್ಲ. ಅದಕ್ಕೆ ಇದನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು: Ok, ಇನ್ನು ಮಾನ್ಯ ರೇವಣ್ಣ, ಮಾನ್ಯ ಹೆಚ್.ಕೆ. ಕುಮಾರಸ್ವಾಮಿ ಮತ್ತು ಮಾನ್ಯ ಕೆ.ಎಂ. ಶಿವಲಿಂಗೇಗೌಡರವರು ಇಲ್ಲ. ಇನ್ನು ಮಾನ್ಯ ಯಶವತರಾಯಗೌಡ ವಿ. ಪಾಟೀಲ್‌ರವರೆ ಕೇಳಿ.

14. ವಿಷಯ: 1993ರಲ್ಲಿ ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಮತ್ತು ಲಾತೂರು ಜಿಲ್ಲೆಗಳಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಖೇಡಗಿ ಮತ್ತು ಚಿಕ್ಕಮಣ್ಣೂರು ಗ್ರಾಮಗಳ ಮನೆಗಳು ಶಿಥಿಲಗೊಂಡಿರುವ ಬಗ್ಗೆ.

ಶ್ರೀ ಯಶವಂತರಾಯಗೌಡ ವಿ. ಪಾಟೀಲ್ (ಇಂಡಿ): ಮಾನ್ಯ ಅಧ್ಯಕ್ಷರೆ, 1993ರಲ್ಲಿ ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಮತ್ತು ಲಾತೂರು ಜಿಲ್ಲೆಗಳಲ್ಲಿ ಸಂಭವಿಸಿದ ಭೀಕರ ಭೂಕಂಪದಿಂದ ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಖೇಡಗಿ ಮತ್ತು ಚಿಕ್ಕಮಣ್ಣೂರು ಗ್ರಾಮಗಳ ಮನೆಗಳು ಶಿಥಿಲಗೊಂಡಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು): 1993ರಲ್ಲಿ ಮಹಾರಾಷ್ಟ್ರದ ಲಾತೂರ್ ಮತ್ತು ಉಸ್ಮಾನಾಬಾದ್‌ನಲ್ಲಿ ಸಂಭವಿಸಿದ ಭೂ–ಕಂಪದಿಂದ ಇಂಡಿ ತಾಲ್ಲೂಕಿನ ಖೇಡಗಿ ಮತ್ತು ಚಿಕ್ಕಮಣ್ಣೂರು ಗ್ರಾಮಗಳಲ್ಲಿ ಮನೆಗಳು ಹಾನಿಯಾಗಿದ್ದಕ್ಕೆ ತೆಗೆದುಕೊಂಡ ಕ್ರಮದ ವರದಿ ಕೆಳಕಂಡಂತಿದೆ.

ತಹಶೀಲ್ದಾರ್ ಇಂಡಿ ಇವರು ಹಳೇ ಚಿಕ್ಕಮಣ್ಣೂರು ಗ್ರಾಮಕ್ಕೆ ಭೇಟಿ ನೀಡಿ ಗ್ರಾಮ ಪಂಚಾಯತ್ ಸದಸ್ಯರೊಂದಿಗೆ ಭೂ–ಕಂಪ ಪ್ರಭಾವದಿಂದ ಬಿರುಕುಬಿಟ್ಟು ಹಾನಿಯಾದ ಮನೆಗಳ ಬಗ್ಗೆ. ಪರಿಶೀಲಿಸಿದ್ದು ಗ್ರಾಮಪಂಚಾಯತಿ ಸದಸ್ಯರು ಚಿಕ್ಕಮಣ್ಣೂರು ಗ್ರಾಮದಲ್ಲಿ ಒಟ್ಟು 120 ಮನೆಗಳಿದ್ದು ಇದರಲ್ಲಿ 70 ಮನೆಗಳು ಬಿರುಕುಬಿಟ್ಟಿದ್ದವು. ಆದರೆ ಭೂ–ಕಂಪದಿಂದ ಬಿರುಕುಬಿಟ್ಟ ಮನೆಗಳನ್ನು ಸಂತ್ರಸ್ಥರೇ ರಿಪೇರಿ ಮಾಡಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ.

ಖೇಡಗಿ ಗ್ರಾಮದಲ್ಲಿ ಒಟ್ಟು 473 ಮನೆಗಳು ಇದ್ದು, ಈ ಪೈಕಿ 50 ಮನೆಗಳು ಬಿರುಕು ಬಿಟ್ಟಿದ್ದು ಸದರಿ ಮನೆಗಳನ್ನು ಸಂತ್ರಸ್ಥರೇ ರಿಪೇರಿ ಮಾಡಿಕೊಂಡಿರುತ್ತಾರೆ.

ಈ ಎರಡು ಗ್ರಾಮಗಳಲ್ಲಿ ಈ ಘಟನೆ ನಡೆದು 20 ವರ್ಷಗಳು ಕಳೆದಿರುವುದರಿಂದ ಹಾನಿಗೀಡಾದ ಮನೆಗಳನ್ನು ಈಗ ನಿಖರವಾಗಿ ಗುರುತಿಸಲು ಸಾಧ್ಯವಾಗುತ್ತಿಲ್ಲ. ಆದರೆ ಈ ಎರಡು ಗ್ರಾಮಗಳಲ್ಲಿ ಆಗಿನ ತಹಶೀಲ್ದಾರರು ಹಾನಿಯಾದ ಪ್ರತಿ ಮನೆಗಳಿಗೆ ರೂ. 1,000/– ದಿಂದ ರೂ. 1,400/–ವರೆಗೆ ಪರಿಹಾರ ಧನ ವಿತರಿಸಿರುವುದಾಗಿ ಗ್ರಾಮಸ್ಥರು ತಿಳಿಸಿರುತ್ತಾರೆ.

1993ರಲ್ಲಿ ಮಹಾರಾಷ್ಟ್ರದಲ್ಲಿ ಸಂಭವಿಸಿದ ಭೂ–ಕಂಪದಿಂದ ಹಾನಿಗೀಡಾದ ಬಿಜಾಪುರ ಜಿಲ್ಲೆಯ ಉಮರಾಣಿ, ಧೂಳಖೇಡ, ಹಿಂಗಣಿ ಮತ್ತು ಸಂಖ ಗ್ರಾಮಗಳನ್ನು ಸ್ಥಳಾಂತರಿಸಿ ಉಮರಾಣಿ ಗ್ರಾಮದಲ್ಲಿ–50, ಧೂಳಖೇಡ ಗ್ರಾಮದಲ್ಲಿ 238, ಹಿಂಗಣಿ ಗ್ರಾಮದಲ್ಲಿ–176 ಮತ್ತು ಸಂಖ ಗ್ರಾಮದಲ್ಲಿ–75 ಒಟ್ಟು 539 ಭೂ–ಕಂಪನ ನಿರೋಧಕ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ.

2009ರ ಪ್ರವಾಹದಿಂದ ಬಾಧಿತವಾದ ಈ ಎರಡು ಗ್ರಾಮಗಳಲ್ಲಿ ಖೇಡಗಿ ಗ್ರಾಮದಲ್ಲಿ 98 ಮನೆಗಳನ್ನು ಮತ್ತು ಚಿಕ್ಕಮಣ್ಣೂರು ಗ್ರಾಮದಲ್ಲಿ 38 ಮನೆಗಳನ್ನು ಆಸರೆ ಯೋಜನೆಯಡಿಯಲ್ಲಿ ನಿರ್ಮಿಸಿ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದೆ.

ಇಂಡಿ ತಾಲ್ಲೂಕಿನ ಖೇಡಗಿ ಗ್ರಾಮದಲ್ಲಿ ಭೂ–ಕಂಪನ ಪ್ರಭಾವದಿಂದ ಶೇ.10.57ರಷ್ಟು ಮತ್ತು ಚಿಕ್ಕಮಣ್ಣೂರು ಗ್ರಾಮದಲ್ಲಿ ಶೇ.58.33ರಷ್ಟು ಮನೆಗಳಿಗೆ ಹಾನಿಯಾಗಿದ್ದು ಸದರಿ ಮನೆಗಳಿಗೆ ಆ ಸಮಯದಲ್ಲಿ ಚಾಲ್ತಿಯಲ್ಲಿದ್ದ ಮಾರ್ಗಸೂಚಿಯ ಪ್ರಕಾರ ಪರಿಹಾರಧನ ಈಗಾಗಲೇ ವಿತರಿಸಲಾಗಿರುವುದರಿಂದ ಈಗ ಹೆಚ್ಚುವರಿ ಪರಿಹಾರ ನೀಡಲು ಅವಕಾಶವಿರುವುದಿಲ್ಲ.

ಮಾನ್ಯ ಅಧ್ಯಕ್ಷರೆ, 1993ರಲ್ಲಿ ಮಹಾರಾಷ್ಟ್ರ ರಾಜ್ಯದ ಉಸ್ಮಾನಾಬಾದ್ ಮತ್ತು ಲಾತೂರು ಜಿಲ್ಲೆಗಳಲ್ಲಿ ಸಂಭವಿಸಿದ ಭೀಕರ ಭೂಕಂಪ ಸಂಭವಿಸಿದೆ. ಇಲ್ಲಿ ಭೂಕಂಪವಾಗಿ ಹೆಚ್ಚು–ಕಡಿಮೆ 32 ವರ್ಷಗಳಾಗಿದೆ. ಇದರ ಪ್ರಭಾವ ಇಂಡಿ ತಾಲ್ಲೂಕಿನ ಖೇಡಗಿ ಮತ್ತು ಚಿಕ್ಕಮಣ್ಣೂರು ಗ್ರಾಮಗಳಲ್ಲಿ ಮನೆಗಳು ಶಿಥಿಲವಾಗಿದೆಯೆಂದು 32 ವರ್ಷಗಳು ಆದಮೇಲೆ ತಿಳಿಸಿದ್ದು, ಇದರ ಬಗ್ಗೆ ಸುದೀರ್ಘವಾದ statement ಕೊಟ್ಟಿದ್ದೇನೆ.

ಅಧ್ಯಕ್ಷರು: ಈಗ ಅದನ್ನು ಕೇಳುವುದಕ್ಕೆ ಹೊರಟಿದ್ದಾರಾ?

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಅದು ಆದಮೇಲೆ ತಹಶೀಲ್ದಾರ್‌ರವರು ಅಲ್ಲಿಗೆ ಭೇಟಿ ಕೊಟ್ಟು, ಕೆಲವು ಆಗಿರುವ ಗುರ್ತಿಲ್ಲ, ಕೆಲವರು ಎಲ್ಲಾ ಸ್ವಂತ ಮಾಡಿದ್ದಾರೆ. ಅಲ್ಲಿ ಆಗಲೇ ಕೆಲವು rehabilitation ಆಗಿದೆ, ಸರ್ಕಾರದ ವತಿಯಿಂದ ಏನೇನು ಕೊಡಬೇಕೋ ಅಷ್ಟನ್ನೂ ಕೂಡ ಅಲ್ಲಿ ಕೊಟ್ಟಿದ್ದೇವೆ. ಯಾವುದೇ ರೀತಿಯ ಪರಿಹಾರದಿಂದ ಹಿಡಿದು ಮನೆಗಳನ್ನು ಕಟ್ಟಿಸಿ,

ಸ್ಥಳಾಂತರ ಮಾಡುವವರೆಗೂ ಅವರಿಗೆ ಪೂರ್ಣ ಪುನರ್ ವಸತಿಯನ್ನು ಅಲ್ಲಿ ಕಲ್ಪಿಸಲಾಗಿದೆ.

ಅಧ್ಯಕ್ಷರು: Ok.

ಶ್ರೀ ಯಶವಂತರಾಯಗೌಡ ವಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅದು ಆ ರೀತಿಯಲ್ಲ, ಅಲ್ಲಿ 1993ರಲ್ಲಿ ಭೂಕಂಪವಾಗಿದೆ.

ಅಧ್ಯಕ್ಷರು: No ಚರ್ಚೆ.

ಶ್ರೀ ಯಶವಂತರಾಯಗೌಡ ವಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅಲ್ಲಿ very burning problem ಇದೆ, ಆ ಎರಡು ಗ್ರಾಮಗಳಲ್ಲಿ ಜನರು ಇರುವಂಥ ಪರಿಸ್ಥಿತಿ ಇಲ್ಲ. Petition Committee ಯವರು visit ಮಾಡಿದ್ದಾರೆ.

ಅಧ್ಯಕ್ಷರು: ತಾವು ಬೇರೆ ರೂಪದಲ್ಲಿ ಚರ್ಚೆಗೆ ತನ್ನಿ, ಈಗ ಮಾನ್ಯ ಮಂತ್ರಿಯವರ ಹೇಳಿಕೆ ಸ್ಪಷ್ಟವಾಗಿದೆ, ಅದಕ್ಕೆ ಪರ್ಯಾಯವಾಗಿ ಏನಾದರೂ ಮಾಡಬೇಕೆಂದರೆ, ಬೇರೆ ರೂಪದಲ್ಲಿ ತನ್ನಿ.

ಶ್ರೀ ಯಶವಂತರಾಯಗೌಡ ವಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, Petition Committee ಯಲ್ಲಿ ಉಪಾಧ್ಯಕ್ಷರೇ, ಅಧ್ಯಕ್ಷರಾಗಿದ್ದಾರೆ, ಅವರೇ visit ಮಾಡಿದ್ದಾರೆ. ಅಲ್ಲಿ ಜನರು ಇರುವಂಥ ವ್ಯವಸ್ಥೆಯಲ್ಲಿ ಇಲ್ಲವೆಂಬುದನ್ನು ಮನಗಂಡಿದ್ದಾರೆ. ತಾವು ಬೇಕಾದರೆ ಅವರನ್ನು ಕೇಳಿ.

ಅಧ್ಯಕ್ಷರು: ಆಯಿತು, ಮಾನ್ಯ ಮಂತ್ರಿಯವರೆ, ಏನಾದರೂ ಇದ್ದರೆ ಪರಿಶೀಲನೆ ಮಾಡಿ, Petition Committee ವರದಿ ಏನಿದೆಯೆಂಬುದನ್ನು ಪರಿಶೀಲನೆ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್: ಆಯಿತು.